**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ, ಪಿರಿಯಾಪಟ್ಟಣ.**

**ಸಿ.ಸಿ. ಸಂಃ 976/2019**

| | | |
|---|---|---|
| ಸಾಕ್ಷಿಯ ಹೆಸರುಃ | ಸಣ್ಣತಮ್ಮಯ್ಯ | ಫ್ರಾಸಾಃಃ 3 |
| ತಂದೆ ಹೆಸರುಃ | ಕರಿಯಯ್ಯ | ಚಾಸಾಃಃ 2 |
| ವಯಸ್ಸುಃ | 75 ವರ್ಷ | ಪ್ರಮಾಣೀಕರಿಸಿದ<br>ದಿಃ 10/09/2024 |
| ಉದ್ಯೋಗಃ | ವ್ಯವಸಾಯ | |
| ವಾಸ ಸ್ಥಳಃ | ಕೆಳಗನಹಳ್ಳಿ ಗ್ರಾಮ,<br>ಪಿರಿಯಾಪಟ್ಟಣ ತಾ. | |

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರಿಂದಃ**

ನನಗೆ ಆರೋಪಿತರ ಪರಿಚಯವಿದೆ. ನನಗೆ ಫ್ರಾಸಾ-1 ಮತ್ತು 2, ಚಾಸಾ-4 ರಿಂದ 6 ರವರ ಪರಿಚಯ ಇದೆ. ನನಗೆ ಈ ಪ್ರಕರಣದ ಬಗ್ಗೆ ಏನೂ ಗೊತ್ತಿಲ್ಲ. ನಾನು ಜಗಳ ಮುಗಿದ ಮೇಲೆ ನಾನು ಸ್ಥಳಕ್ಕೆ ಹೋಗಿದ್ದೆ. ಫ್ರಾಸಾ-1 ರವರು ನನ್ನನ್ನು ಠಾಣೆಗೆ ಕರೆದಿದ್ದರು. ನಂತರ ನಾನು ಠಾಣೆಗೆ ಹೋಗಿದ್ದೆ. ನಾನು ಠಾಣೆಯಲ್ಲಿ ಒಂದು ದಾಖಲೆಗೆ ಸಹಿ ಮಾಡಿದೆ. ನಾನು ಜಗಳವನ್ನು ನೋಡಿದ ಬಗ್ಗೆ ಪೋಲಿಸರಿಗೆ ಹೇಳಿಕೆ ನೀಡಿಲ್ಲ.

**(ಈ ಸಮಯದಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರುತ್ತಾರೆ. ಕಡತವನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ ಮಾನ್ಯ ಸಸಅ ರವರಿಂದಃ**

2. ಪ್ರಭು ಮತ್ತು ಚನ್ನಬಸಪ್ಪ ನವರ ಮಕ್ಕಳಿಗೂ ಜಮೀನು ವಿಚಾರವಾಗಿ ಗಲಾಟೆ ಇತ್ತು ಎಂದು ನನಗೆ ಗೊತ್ತು. ಪ್ರಭು ರವರು ಸರ್ವೇ ಮಾಡಿಸಲು ಸರ್ವೇ ಅಧಿಕಾರಿಗಳಿಗೆ ಮನವಿ ಮಾಡಿದ್ದರು ಎಂದರೆ ಸರಿ. ದಿಃ 01/02/2019 ರಂದು ಬೆಳಿಗ್ಗೆ 7.30 ಗಂಟೆ ಸಮಯದಲ್ಲಿ ನಾನು ಪ್ರಭು ರವರ ಜಮೀನಿನ ಬಳಿ ನಮ್ಮ ಜಮೀನಿನ ಕಡೆಗೆ ನಡೆದುಕೊಂಡು ಹೋಗುತ್ತಿದ್ದಾಗ ಪ್ರಭು ರವರು ಒಂದು ಜೆಸಿಬಿ ಯನ್ನು ಕರೆಸಿಕೊಂಡು ಬಂದು ಸರ್ವೇ

ಅಧಿಕಾರಿಗಳು ಗುರುತಿಸಿಕೊಟ್ಟಿರುವ ತಮ್ಮ ಜಮೀನಿನ ಹದ್ದುಬಸ್ತಿಗಾಗಿ ಟ್ರಂಚ್ ತೆಗೆಸಲು ನಿಂತಿದ್ದಾಗ ಲೇಟ್ ಚನ್ನಬಸಪ್ಪ ನವರ ಮಗನಾದ ಪ್ರಕಾಶ, ಮಹದೇವಪ್ಪ ಅಲಿಯಾಸ್ ಬಾಬು, ಸವಿತಾ ಅಲಿಯಾಸ್ ತ್ರಿವೇಣಿ ಮತ್ತು ಮಹೇಶ ರವರು ಗುಂಪುಕಟ್ಟಿಕೊಂಡು ಪ್ರಭು ರವರು ಟ್ರಂಚ್ ತೆಗೆಸಲು ನಿಂತಿದ್ದಾಗ ಅವರನ್ನು ಕೆಟ್ಟ ಭಾಷೆಯಲ್ಲಿ ಬೈದರು ಎಂದರೆ ಸರಿಯಲ್ಲ. ಮಹದೇವಪ್ಪ ಪ್ರಭುರವರನ್ನು ಮುಂದೆಹೋಗದಂತೆ ತಬ್ಬಿ ಹಿಡಿದುಕೊಂಡರು ಎಂದರೆ ಸರಿಯಲ್ಲ. ಸವಿತ ಮತ್ತು ಪ್ರಕಾಶರವರು ಪ್ರಭುರವರ ಮೈಕೈಗೆ ಹೊಡೆದರು ಎಂದರೆ ಸರಿಯಲ್ಲ. ಆಗ ನಾನು, ಕೆಂಡಗಣ್ಣ, ಪುಟ್ಟರಾಜನಾಯಕ ಮತ್ತು ಮಹದೇವನಾಯಕ ಸೇರಿ ಜಗಳ ಬಿಡಿಸಿದೆವು ಎಂದರೆ ಸರಿಯಲ್ಲ. ಮಹೇಶ ಇನ್ನೊಂದು ಸಾರಿ ಜಮೀನಿನ ವಿಚಾರಕ್ಕೆ ಬಂದರೆ ಕೊಲೆ ಮಾಡುವುದಾಗಿ ಬೆದರಿಸಿದರು ಎಂದರೆ ಸರಿಯಲ್ಲ. ಈ ಸಂಬಂಧ ಪ್ರಭುರವರು ಠಾಣೆಯಲ್ಲಿ ದೂರನ್ನು ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ. ನಾನು ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ ಎಂದು ಹೇಳಿಕೆ ನೀಡಿದ್ದೆ ಎಂದರೆ ಸರಿಯಲ್ಲ.

3. ಈಗ ನನಗೆ ಓದಿ ಹೇಳಿದಂತೆ "ದಿನಾಂಕ:01/02/2019 ರಂದು ......................... ಆರೋಪಿಗಳನ್ನು ನೋಡಿದರೆ ಗುರ್ತಿಸುತ್ತೇನೆ." ಎಂದು ಪೊಲೀಸರ ಮುಂದೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯ ಹೇಳಿಕೆಯನ್ನು **ನಿಪಿ.4** ಎಂದು ಗುರುತಿಸಲಾಯಿತು. ಆರೋಪಿತರು ನಮ್ಮ ಗ್ರಾಮಸ್ಥರಾದ್ದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು: ಆರೋಪಿತರ ಪರ ವಕೀಲರಿಂದ:** ಇಲ್ಲ.

**ಮರು ವಿಚಾರಣೆ:** ಇಲ್ಲ.

**ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**ಹೆಚ್.ಸಿ.ನ್ಯಾ ಹಾಗೂ ಪ್ರ.ದ.ನ್ಯಾದಂ.,**

**ಪಿರಿಯಾಪಟ್ಟಣ.**